# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 28 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ರೈತರ ಕೃಷಿ ವಿದ್ಯುತ್ ಪಂಪ್‌ಸೆಟ್‌ಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಡಿಸೆಂಬರ್ 2022ರ ಅಂತ್ಯಕ್ಕೆ ರಾಜ್ಯದಲ್ಲಿನ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಒಟ್ಟು 33,11,436 ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಅವುಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ರೈತರ ಕೃಷಿ ಪಂಪ್‌ಸೆಟ್‌ಗಳ ಅಂಕಿ ಅಂಶಗಳ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು; | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ವ್ಯಾಪ್ತಿಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ರೈತರ ಕೃಷಿ ಪಂಪ್‌ಸೆಟ್‌ಗಳ ತಾಲ್ಲೂಕುವಾರು ವಿವರಗಳು ಕೆಳಕಂಡಂತಿವೆ:- |

| ಕ್ರ. ಸಂ. | ತಾಲ್ಲೂಕಿನ ಹೆಸರು | ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ (ಡಿಸೆಂಬರ್ 2022ರ ಅಂತ್ಯಕ್ಕೆ) |
|---|---|---|
| 1 | ಮೈಸೂರು | 15,281 |
| 2 | ಹೆಚ್.ಡಿ.ಕೋಟೆ | 12,349 |
| 3 | ಹುಣಸೂರು | 24,474 |
| 4 | ಸರಗೂರು | 7,369 |
| 5 | ನಂಜನಗೂಡು | 21,171 |
| 6 | ತಿ.ನರಸೀಪುರ | 18,153 |
| 7 | ಕೆ.ಆರ್.ನಗರ | 12,721 |
| 8 | ಪಿರಿಯಾಪಟ್ಟಣ | 18,167 |
| | **ಮೈಸೂರು ಜಿಲ್ಲೆ** | **129,685** |
| 1 | ಚಾಮರಾಜನಗರ | 17,246 |
| 2 | ಗುಂಡ್ಲುಪೇಟೆ | 23,392 |
| 3 | ಕೊಳ್ಳೇಗಾಲ | 10,058 |
| 4 | ಹನೂರು | 13,792 |
| 5 | ಯಳಂದೂರು | 4,582 |
| | **ಚಾಮರಾಜನಗರ ಜಿಲ್ಲೆ** | **69,070** |
| | **ಒಟ್ಟು** | **198,755** |

....2

**ಇ)** ಪಿ.ಎಂ. ಕುಸುಮ್ ಯೋಜನೆಯಡಿ ರೈತರ ಪಂಪ್‌ಸೆಟ್‌ಗಳನ್ನು ಸೌರ ಶಕ್ತಿಗೆ ಪರಿವರ್ತನೆ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು;

ಕೇಂದ್ರ ಸರ್ಕಾರವು ಸೌರ ಚಾಲಿತ ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಕಾರ್ಯಕ್ರಮ PM-KUSUM (Pradhan Mantri Kisan Urja Suraksha evam Uttan Mahaabhiyan) Component-B ಯೋಜನೆಯನ್ನು ದಿನಾಂಕ 22.07.2019 ರಿಂದ ಜಾರಿಗೆ ತಂದಿರುತ್ತದೆ. PM-KUSUM, Component-B ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ 7.5 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್‌ಗೆ ಶೇ.30 ರಷ್ಟು ಕೇಂದ್ರ ಸಹಾಯಧನ ಒದಗಿಸುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 441 ವಿಎಸ್‌ಸಿ 2021 ದಿನಾಂಕ: 19.03.2022 ರನ್ವಯ ರಾಜ್ಯ ಸರ್ಕಾರದಿಂದ ಸಾಮಾನ್ಯ ವರ್ಗದ ರೈತ ಫಲಾನುಭವಿಗಳಿಗೆ ಪ್ರತಿ ಸೌರ ಪಂಪ್‌ಸೆಟ್‌ಗೆ ಶೇ. 30 ರಷ್ಟು ಹಾಗೂ ಪರಿಶಿಷ್ಟ ಜಾತಿ/ಪಂಗಡ ವರ್ಗದ ಫಲಾನುಭವಿಯ ಪಂಪ್‌ಸೆಟ್‌ಗೆ ಶೇ. 50 ರಷ್ಟು ರಾಜ್ಯ ಸಹಾಯಧನ ಒದಗಿಸಲಾಗುವುದು. ಇನ್ನುಳಿದ ಹಣವನ್ನು ರೈತ ಫಲಾನುಭವಿಗಳಿಂದ ಭರಿಸಿ ಯೋಜನೆಯನ್ನು ಕ್ರೆಡಲ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸ್ತುತ, ಸದರಿ ಯೋಜನೆಯಡಿ 1532 ಅರ್ಜಿಗಳು ಆನ್ ಲೈನ್ ಮೂಲಕ ನೊಂದಣಿಗೊಂಡಿದ್ದು, ಎಂಪ್ಯಾನೆಲ್ಡ್ ಏಜನ್ಸಿಗಳಿಗೆ ಕಾರ್ಯಾದೇಶ ನೀಡುವ ಕಾರ್ಯವು ಪ್ರಗತಿಯಲ್ಲಿದ್ದು, ಅನುಷ್ಠಾನ ಕಾರ್ಯವನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು.

ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ (MNRE) ಮಾರ್ಗ ಸೂಚಿಗಳನ್ವಯ ಸದರಿ ಯೋಜನೆಯು ಜಾಲಮುಕ್ತ ನೀರಾವರಿ ಪಂಪ್ ಸೆಟ್‌ಗಳಿಗೆ ಸೀಮಿತವಾಗಿದ್ದು, ಈಗಾಗಲೇ ಗ್ರಿಡ್ ವ್ಯವಸ್ಥೆಯಿಂದ ವಿದ್ಯುತ್ ಸರಬರಾಜು ಹೊಂದಿದ ಕೃಷಿ ಪಂಪ್‌ಸೆಟ್‌ಗಳಿಗೆ PM-KUSUM, Component-B ಯೋಜನೆ ಅನ್ವಯಿಸುವುದಿಲ್ಲ.

ಕೇಂದ್ರ ಸರ್ಕಾರದ PM-KUSUM Component C (ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಎವಂ ಉತ್ಥಾನ ಮಹಾಭಿಯಾನ್) ಯೋಜನೆಯಡಿ ಫೀಡರ್ ಮಟ್ಟದ ಸೌರೀಕರಣ ಮೂಲಕ ರೈತರ ಪಂಪ್ ಸೆಟ್‌ಗಳಿಗೆ ಸೌರ ಶಕ್ತಿಯಿಂದ ವಿದ್ಯುತ್ ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗಿರುತ್ತದೆ.

ಕೇಂದ್ರ ಸರ್ಕಾರವು ಸದರಿ ಯೋಜನೆಯಡಿ ರಾಜ್ಯಕ್ಕೆ ನೀಡಿರುವ ಹಂಚಿಕೆ ಈ ಕೆಳಗಿನಂತಿದೆ:

| ಕ್ರ. ಸಂ. | ವಿದ್ಯುತ್ ಸರಬರಾಜು ಕಂಪನಿ | ಹಂಚಿಕೆ ಮಾಡಿದ ಒಟ್ಟು ಕೃಷಿ ಪಂಪ್ ಸೆಟ್ ಗಳ ಸಂಖ್ಯೆ |
|---|---|---|
| 1 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) | 2,62,331 |
| 2 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) | 65,000 |
| 3 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ) | 10,000 |
| | **ಒಟ್ಟು** | **3,37,331** |

ಕೇಂದ್ರ ಸರ್ಕಾರದ ಅನುಮೋದನೆಯಂತೆ, ರಾಜ್ಯದಲ್ಲಿ ಒಟ್ಟು ಅಂದಾಜು 1302 ಮ.ವ್ಯಾ ಸಾಮರ್ಥ್ಯದ ಸೋಲಾರ್ ಘಟಕಗಳನ್ನು ಅನುಷ್ಠಾನಗೊಳಿಸಲಾಗುವುದು. (ಬೆಸ್ಕಾಂ– 1081 ಮೆ.ವ್ಯಾ, ಹೆಸ್ಕಾಂ – 180 ಮೆ.ವ್ಯಾ ಮತ್ತು ಸೆಸ್ಕ್ – 41ಮೆ.ವ್ಯಾ).

RESCO (Renewable Energy Service Company) ಮಾದರಿಯಲ್ಲಿ ಹೆಸ್ಕಾಂ ಮತ್ತು ಸೆಸ್ಕ ವ್ಯಾಪ್ತಿಯಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಕ್ರೆಡಲ್ ಸಂಸ್ಥೆಯನ್ನು ನೋಡೆಲ್ ಸಂಸ್ಥೆಯಾಗಿ ಹಾಗೂ ಬೆಸ್ಕಾಂ ವ್ಯಾಪ್ತಿಯಲ್ಲಿ ಬೆಸ್ಕಾಂ ಸಂಸ್ಥೆಯನ್ನು ನೋಡೆಲ್ ಸಂಸ್ಥೆಯಾಗಿ ನೇಮಿಸಿದೆ.

ಈ) ಈ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್‌ನ್ನು ಸರಬರಾಜು ಮಾಡಲು ಪ್ರತ್ಯೇಕ ಫೀಡರ್ ಸ್ಥಾಪನೆ ಮಾಡಲಾಗುತ್ತಿದೆಯೇ; ಮತ್ತು ಇದಕ್ಕಾಗಿ ಖರ್ಚು ಮಾಡುತ್ತಿರುವ ಅನುದಾನದ ಮೊತ್ತವೆಷ್ಟು; ಈ ಪ್ರಕ್ರಿಯೆಯು ಯಾವ ಹಂತದಲ್ಲಿದೆ? (ವಿವರ ನೀಡುವುದು)

ಹೌದು, ವಿವರಗಳು ಈ ಕೆಳಗಿನಂತಿದೆ:

| ವಿಸಕಂ | ಪ್ರಸ್ತಾಪಿಸಲಾದ 11 ಕೆ.ವಿ ಫೀಡರ್‌ಗಳ ಸಂಖ್ಯೆ | ಪ್ರಸ್ತಾಪಿಸಲಾದ ಸೌರ ಸಾಮರ್ಥ್ಯ (ಮೆ.ವ್ಯಾ.ಗಳಲ್ಲಿ) | ಯೋಜನಾ ಮೊತ್ತ (ರೂ.ಕೋಟಿಗಳಲ್ಲಿ | ಕೇಂದ್ರ ಸರ್ಕಾರದ ಪಾಲು (ಶೇ.30) |
|---|---|---|---|---|
| ಬೆವಿಕಂ | 695 | 1081 | 4557 | 1367 |
| ಚಾವಿಸನಿನಿ | 19 | 41 | ಪ್ರತಿ ಮೆ.ವ್ಯಾ.ಗೆ | |
| ಹೆಸ್ಕಾಂ | 98 | 180 | ರೂ.3.5 ಕೋಟಿ ಎಂದು ಪರಿಗಣಿಸಿ) | |

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ದಿನಾಂಕ:06.01.2023 ರಂದು Notification Inviting Tender (NIT) ನೀಡಲಾಗಿದ್ದು, ಟೆಂಡರ್ ಆಹ್ವಾನಿಸಲಾಗಿದೆ.

ಸಂಖ್ಯೆ: ಎನರ್ಜಿ 33 ಇಬಿಐಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 28ಕ್ಕೆ ಅನುಬಂಧ

ಡಿಸೆಂಬರ್ 2022ರ ಅಂತ್ಯಕ್ಕೆ ರಾಜ್ಯದಲ್ಲಿನ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಇರುವ ರೈತರ ಕೃಷಿ ಪಂಪ್‌ಸೆಟ್‌ಗಳ ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ:-

| ಕ್ರ. ಸಂ. | ಜಿಲ್ಲೆ | ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ |
|---|---|---|
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | | |
| 1 | ಬೆಂಗಳೂರು ನಗರ | 32,818 |
| 2 | ಬೆಂಗಳೂರು ಗ್ರಾಮೀಣ | 75,167 |
| 3 | ಕೋಲಾರ | 1,05,029 |
| 4 | ಚಿಕ್ಕಬಳ್ಳಾಪುರ | 1,05,064 |
| 5 | ರಾಮನಗರ | 87,606 |
| 6 | ದಾವಣಗೆರೆ | 1,61,120 |
| 7 | ಚಿತ್ರದುರ್ಗ | 1,48,440 |
| 8 | ತುಮಕೂರು | 2,90,858 |
| | **ಒಟ್ಟು** | **10,06,102** |
| ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | | |
| 1 | ದಕ್ಷಿಣ ಕನ್ನಡ | 1,27,829 |
| 2 | ಉಡುಪಿ | 81,520 |
| 3 | ಶಿವಮೊಗ್ಗ | 1,05,750 |
| 4 | ಚಿಕ್ಕಮಗಳೂರು | 78,993 |
| | **ಮೆಸ್ಕಾಂ ಒಟ್ಟು** | **3,94,092** |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | | |
| 1 | ಮೈಸೂರು | 1,29,685 |
| 2 | ಚಾಮರಾಜನಗರ | 69,070 |
| 3 | ಕೊಡಗು | 14,951 |
| 4 | ಮಂಡ್ಯ | 1,17,428 |
| 5 | ಹಾಸನ | 1,41,260 |
| | **ಒಟ್ಟು** | **4,72,394** |

| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | | |
|---|---|---|
| 1 | ಧಾರವಾಡ | 37,633 |
| 2 | ಗದಗ | 42,038 |
| 3 | ಹಾವೇರಿ | 1,08,486 |
| 4 | ಉತ್ತರ ಕನ್ನಡ | 84,193 |
| 5 | ಬೆಳಗಾವಿ | 3,65,191 |
| 6 | ಬಾಗಲಕೋಟ | 1,58,201 |
| 7 | ಬಿಜಾಪುರ | 2,15,226 |
| | **ಒಟ್ಟು** | **10,10,968** |
| **ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ** | | |
| 1 | ಬೀದರ್ | 85,239 |
| 2 | ಕಲಬುರಗಿ | 85,256 |
| 3 | ಯಾದಗಿರಿ | 38,314 |
| 4 | ರಾಯಚೂರು | 60,778 |
| 5 | ಕೊಪ್ಪಳ | 66,055 |
| 6 | ಬಳ್ಳಾರಿ | 38,411 |
| 7 | ವಿಜಯನಗರ | 53,827 |
| | **ಒಟ್ಟು** | **4,27,880** |
| | **ಎಸ್ಕಾಂಗಳ ಒಟ್ಟು** | **33,11,436** |